ಸಾಕ್ಷಿಯೆಂದರೆ ಅಡಿಗರ ಕಾವ್ಯವೇ ಎಂಬ ಮಾತಂತೂ ಆಗ ಚಲಾವಣೆಯಿತ್ತು. ಅಡಿಗರ ಕಾವ್ಯ ಶ್ರೇಷ್ಠತೆಗೊಂದು ಮಾನದಂಡವಾಗಿತ್ತು.

ಹಾಗಾದರೆ ಶ್ರೇಷ್ಠತೆಯೆನ್ನುವುದು ವ್ಯಕ್ತಿಕೇಂದ್ರಿತ ಸಾಧನೆಯೆ? ನವ್ಯಸಾಹಿತಿಗಳ ಮಟ್ಟಿಗೆ ಹೌದು. ನವ್ಯಸಾಹಿತ್ಯವು ನಂಬಿದ್ದು ಸಾಮುದಾಯಿಕ ಅನುಭವದ ಪ್ರತಿನಿಧೀಕರಣವನ್ನಲ್ಲ. ವೈಯಕ್ತಿಕ ಅನುಭವ ಪ್ರಾಮಾಣ್ಯವೇ ಮುಖ್ಯವೆಂಬುದು ನವ್ಯ ಸಾಹಿತ್ಯ ಸೃಷ್ಟಿಯ ತಾತ್ವಿಕ ನೆಲೆ. ಆದ್ದರಿಂದ ಶ್ರೇಷ್ಠತೆಯ ನಿರ್ಣಯವು ವ್ಯಕ್ತಿ ಮತ್ತು ಕೃತಿ ಕೇಂದ್ರಿತ ನೆಲೆಯನ್ನು ಆಧರಿಸಿತು. ಒಟ್ಟಾರೆ ಸಾಮಾಜಿಕ ಆಯಾಮಕ್ಕೆ ಹೊರತಾದ ಕೇವಲ ಏಕವ್ಯಕ್ತಿ, ಏಕಕೃತಿ ಮಾತ್ರವೇ ಮುಖ್ಯವೆನ್ನಿಸಿತು. ಒಂದೇ ಕೃತಿಯನ್ನು ಬರೆದ ಒಬ್ಬ ವ್ಯಕ್ತಿಯು ಬದುಕಿರುವವರೆಗೂ 'ಶ್ರೇಷ್ಠ'ವೆಂಬ ಹಣೆಪಟ್ಟಿ ಪಡೆದು ಮತ್ತು ಅಗೋಚರ ಪಟ್ಟದಲ್ಲಿ ಇರಬಹುದಿತ್ತು. ಒಂದೋ ಎರಡೋ ಕೃತಿ ಬರೆದು ಶ್ರೇಷ್ಠತೆಯ ಪ್ರಶಂಸೆ ಪಡೆದವರ ಪ್ರಸ್ತಾಪ ನಿರಂತರವಾಗಿ ಬರುತ್ತಲೇ ಇತ್ತು. ಕೆಲವು ವಲಯದಲ್ಲಿ ಈಗಲೂ ಬರುತ್ತಿದೆ. ಇದು ವ್ಯಕ್ತಿಗತವಾದದ (Individualism) ಫಲ. ಈ ವಾದಕ್ಕೆ ಅಥವಾ ಈ ವಾದವನ್ನು ನಂಬಿದ ನವ್ಯರಿಗೆ ಚಾರಿತ್ರಿಕತೆ ಮುಖ್ಯವಾಗಲಿಲ್ಲ. ನವ್ಯವೊಂದು ಹುಟ್ಟುವುದಕ್ಕೆ ಮುಂಚೆ ನವೋದಯ ಸಾಹಿತ್ಯವು ಕಟ್ಟಿಕೊಟ್ಟ ಚರಿತ್ರೆಯೂ ಮುಖ್ಯವೆಂದು ಅನೇಕರಿಗೆ ಅನ್ನಿಸಲಿಲ್ಲ. ಕನ್ನಡದ ಸಮಕಾಲೀನ ಸಾಹಿತ್ಯೇತಿಹಾಸದೊಂದಿಗೆ ಸಂಬಂಧವನ್ನು ಕಡಿತಗೊಳಿಸಿಕೊಂಡು ಆಂಗ್ಲ ಸಾಹಿತ್ಯದಿಂದ ಪಡೆದ ತಾತ್ವಿಕತೆಗೆ ಆದ್ಯತೆ ನೀಡಿದ್ದು ನವ್ಯರಲ್ಲಿ ಎದ್ದು ಕಾಣುತ್ತದೆ. ಚರಿತ್ರೆಯ ಕೊಂಡಿ ಕಳಚಿಕೊಂಡ ಅವರು 'ಪರಕೀಯ'ರಾದರೊ, ಅವರನ್ನು ನೋಡುತ್ತ ಹಳೆಯದಕ್ಕೆ ಮಾತ್ರ ಹಪಹಪಿಸಿದವರು ಪರಕೀಯರಾದರೊ ಅಥವಾ ಸಾಹಿತ್ಯದ ಚರಿತ್ರೆಯೇ ಪರಕೀಯ ಪ್ರಜ್ಞೆಗೆ ತುತ್ತಾಯಿತೊ ಎಂಬ ಪ್ರಶ್ನೆಗಳ ಶೋಧ ಮುಖ್ಯ. ಇಷ್ಟಂತೂ ನಿಜ: ನಮ್ಮ ಸ್ವೀಕರಣೆಯ ಮನೋಧರ್ಮವು ನಿರಾಕರಣೆಯ ಪ್ರವೃತ್ತಿಯಾಗಿ ಸ್ಥಿತ್ಯಂತರಕ್ಕೆ ಒಳಗಾಯಿತು. 'ಅವರೇನು ಮಹಾ ಬರೆಯುತ್ತಾರೆ? ಅವರು ಕವಿಯೇ ಅಲ್ಲ, ಸಾಹಿತಿಯೇ ಅಲ್ಲ', ಇಂಥ ಬೀಸು ಬಿರುನುಡಿಗಳ ಮೌಖಿಕ ಠೇಂಕಾರಗಳನ್ನು ನಾನು ಕೇಳಿಸಿಕೊಂಡಿದ್ದೇನೆ. ಇಷ್ಟಾಗಿಯೂ ನವ್ಯಸಾಹಿತ್ಯದ ಕೊಡುಗೆಯನ್ನು ಪೂರ್ಣ ನಕಾರಾತ್ಮಕವಾಗಿ ನಾನು ನೋಡುವುದಿಲ್ಲ. ದಾಕ್ಷಿಣ್ಯರಹಿತ ವಿಮರ್ಶೆಯ ಶಿಸ್ತು ಮತ್ತು ಸಾಹಿತ್ಯ ಸೃಷ್ಟಿಯ ಶಿಲ್ಪಕ್ಕೆ ನವ್ಯಸಾಹಿತ್ಯ ಕೊಟ್ಟ ಮಹತ್ವವು ಮುಖ್ಯ ಕೊಡುಗೆಯಾಗಿದೆ. ಕನ್ನಡ ಸಾಹಿತ್ಯ ಪರಂಪರೆಯ ಒಂದು ಮುಖ್ಯ ಘಟ್ಟವಾಗಿ ನಾವು ನವ್ಯ ಸಾಹಿತ್ಯವನ್ನು ಪರಿಗಣಿಸಬೇಕಾಗಿದೆ. ಅದೇ ಸಂದರ್ಭದಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ – ಈ ಎಲ್ಲ ಸಾಹಿತ್ಯ ಘಟ್ಟಗಳೂ ಮುಖಾಮುಖಿಯಾಗುತ್ತಲೇ ಅನುಸಂಧಾನಿಸುತ್ತ ಕನ್ನಡ ಪರಂಪರೆಯ ಚಾರಿತ್ರಿಕ ಭಾಗಗಳಾಗಿವೆಯೆಂಬುದನ್ನು ಅರ್ಥಮಾಡಿಕೊಳ್ಳಬೇಕು. ಶ್ರೇಷ್ಠತೆಯು ಸೊಕ್ಕಾಗಿ ಪರಿಣಮಿಸುವುದು ಮತ್ತು ಸಾಂಸ್ಕೃತಿಕ ರಾಜಕೀಯದ ದಾಳವಾಗುವುದು ಒಂದು ಅನಾರೋಗ್ಯಕರ ಮನೋವೃತ್ತಿಯಾದಾಗ ಚಾರಿತ್ರಿಕ ಬೆಳವಣಿಗೆ ಅರ್ಥವಾಗುವುದಿಲ್ಲ; ವೈರುಧ್ಯ ಮತ್ತು ವೈವಿಧ್ಯದ ಬದುಕು, ಅನುಭವದ ಭಾಗವಾಗುವುದಿಲ್ಲ. ಏಕಮುಖ ಸೃಷ್ಟಿಯಿಂದ ಏಕವ್ಯಕ್ತಿ, ಏಕಕೃತಿ, ಮಾತ್ರ ಮುಖ್ಯವಾಗಿ ಸಾಮುದಾಯಿಕ ವಾಸ್ತವಗಳು ಗೌಣವಾಗುತ್ತವೆ. ಏಕಾಂತ ಮತ್ತು ಲೋಕಾಂತ, ಅಂತರಂಗ ಮತ್ತು ಬಹಿರಂಗ, ವ್ಯಕ್ತಿ ಮತ್ತು ಸಮಾಜ – ಇವುಗಳು ಪರಸ್ಪರ ವಿರುದ್ಧವೂ ಅಲ್ಲ, ಪ್ರತ್ಯೇಕವೂ ಅಲ್ಲ, ಮೇಲುನೋಟಕ್ಕೆ ವೈರುಧ್ಯಗಳಂತೆ ಕಂಡರೂ ಪರಸ್ಪರ ಅನುಸಂಧಾನ ಸಾಧ್ಯವಾಗುವುದೇ ನಿಜದ ಬದುಕು ಮತ್ತು ನಿಜದ ಅಭಿವ್ಯಕ್ತಿ. ಇದು ವೈರುಧ್ಯಗಳನ್ನು ಒಂದಾಗಿಸುವ ಪ್ರಕ್ರಿಯೆ.

ನಾನು ಚಾರಿತ್ರಿಕ ಪ್ರಕ್ರಿಯೆಯ ಬಗ್ಗೆ ಪ್ರಮುಖವಾಗಿ ಪ್ರಸ್ತಾಪಿಸಲು ಕಾರಣವಿದೆ. ಈಗ ನೋಡಿ, ನಮ್ಮಲ್ಲಿ, ವಿಶೇಷವಾಗಿ ಹವ್ಯಾಸಿ ರಂಗಭೂಮಿಯಲ್ಲಿ, ಅಸಂಗತ ನಾಟಕಗಳನ್ನೂ ಒಳಗೊಂಡಂತೆ ಹೊಸ ಪ್ರಯೋಗಗಳು ನಡೆದಿವೆ. ಇದು ಸ್ವಾಗತಾರ್ಹ ಬೆಳವಣಿಗೆಯೆಂಬುದು ನಿಜ. ಆದರೆ, ಹೊಸ ಪ್ರಯೋಗಗಳು ಬಂದಾಕ್ಷಣ ವೃತ್ತಿ ರಂಗಭೂಮಿ ಪರಂಪರೆಯನ್ನು ನಿರ್ಲಕ್ಷಿಸಬಾರದು; ನಿರಾಕರಿಸಬಾರದು. ವೃತ್ತಿ ರಂಗಭೂಮಿಯನ್ನು ಸಮೃದ್ಧಗೊಳಿಸಿದ ಗುಬ್ಬಿ ವೀರಣ್ಣ, ಸುಬ್ಬಯ್ಯನಾಯ್ಡು, ವರದಾಚಾರ್, ಪೀರ್‌ಸಾಬ್ ಮುಂತಾದವರ ಕೊಡುಗೆ ಸಾಮಾನ್ಯವಾದದ್ದಲ್ಲ.